ಹುಡುಗಿಯ ಸಾನಿಧ್ಯದಿಂದಾಗಿ ಫಳಫಳಿಸುತ್ತಿತ್ತು. ಅವಳು ನನ್ನ ತಂಗಿಯನ್ನು ನೋಡಿಕೊಳ್ಳುತ್ತಿದ್ದ ಸಪಾಟಾಗಿ, ಉದ್ದಕ್ಕೆ, ಸಂತನೊಬ್ಬನ ಮರದ ಪ್ರತಿಮೆಯಂತಿದ್ದ ಮುದಿ ದಾದಿಯ ಬದಲಿಗೆ ನೇಮಕಗೊಂಡಿದ್ದಳು. ಅವಳು ನನ್ನ ತಂದೆಯ ಕೈಕೆಳಗೆ ಕೆಲಸ ಮಾಡುತ್ತಿದ್ದವನೊಬ್ಬನ ಮಗಳಾಗಿದ್ದಳು. ಬಡತನದಿಂದ ಬಂದವಳಾಗಿದ್ದ ಅವಳಿಗೆ ಓದನ್ನು ನಿಲ್ಲಿಸಿದ ತಕ್ಷಣ ಅಂಥದ್ದೊಂದು ಒಳ್ಳೆಯ ಕೆಲಸ ಸಿಕ್ಕಿದ್ದರ ಬಗ್ಗೆ ತುಂಬಾ ಖುಷಿಯಿತ್ತು. ಅದೇ ವಯಸ್ಸಿನ ನಾನು ಬಂದ ಮೇಲಂತೂ ಅವಳು ಮತ್ತೂ ಖುಷಿಯಲ್ಲಿದ್ದಳು. ಆದರೆ, ಅಪ್ಪ ಇದ್ದರೆ ಸಾಕು ಅದೆಷ್ಟು ಹೆದರಿಕೊಳ್ಳುತ್ತಿದ್ದಳು, ಅದೆಂಥಾ ನಾಚಿಕೆ ಇರುತ್ತಿತ್ತು! ಊಟದ ಹೊತ್ತಿನಲ್ಲಿ ಅವಳು ನನ್ನ ಕಪ್ಪು ಕಂಗಳ ತಂಗಿ ಲೀಲ್ಯಾಳನ್ನೇ ಕುತೂಹಲದಿಂದ ಗಮನಿಸುತ್ತಿದ್ದಳು. ಅಪ್ಪನಂತೆ ತಂಗಿಯೂ ಮಾತು ಕಡಿಮೆ. ಆದರೆ, ಅವಳ ಈ ಮಿತ ಭಾಷಿತ್ವಕ್ಕೆ ಸಿಡುಕುತನವೂ ಕೂಡಿಕೊಂಡಿತ್ತು.

ಅಪ್ಪ ಈಗ ಊಟದ ಹೊತ್ತಿನಲ್ಲಿ ನಂಬಲಾಗದಷ್ಟು ಬದಲಾಗಿ ಬಿಟ್ಟಿದ್ದ – ಹೆಣಿಗೆ ಹಾಕಿದ ಕೈಗವಸಗಳನ್ನು ಹಾಕಿಕೊಂಡು ಟೇಬಲ್ಲಿನಲ್ಲಿ ಊಟ ಬಡಿಸುತ್ತಿದ್ದ ಅಡಿಗೆಯವಳಾದ ಮುದಿ ಗೂರಿಯತ್ತ ಇರುತ್ತಿದ್ದಂತಹ ಗಂಟು ಮುಖದ ಸಿಟ್ಟಿನ ನೋಟವಿರುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಒಂದು ರೀತಿಯಲ್ಲಿ ರಾಗದ ದನಿಯಲ್ಲಿ ಯಾರನ್ನಲ್ಲದಿದ್ದರೂ ಆ ಹೊಸ ಹುಡುಗಿಯನ್ನು, 'ಡಿಯರ್ ಎಲೆನಾ ನಿಕೋಲಾಯವ್ನಾ,' ಅಂತ ತುಂಬಾ ಔಪಚಾರಿಕವಾಗಿ ಕರೆಯುತ್ತಿದ್ದ. ಅಲ್ಲದೆ, ತಮಾಷೆ ಮಾಡಲು ಅಥವಾ ನಗಲೂ ಪ್ರಯತ್ನಿಸುತ್ತಿದ್ದ. ಇದು ಅವಳನ್ನು ತುಂಬಾ ಪೇಚಿಗೆ ಸಿಲುಕಿಸಿಬಿಡುತ್ತಿತ್ತು. ತುಂಬಾ ದೀನ ನಗು ಅದಕ್ಕವಳ ಉತ್ತರವಾಗಿರುತ್ತಿತ್ತು. ಜೊತೆಗೆ, ನಾಚಿಕೊಂಡು ಬಿಡುತ್ತಿದ್ದಳು. ಉದ್ದದ ಚಂದ ಕೂದಲಿನ, ನಯವಾದ ಬಿಳಿ ರವಿಕೆಯ, ಬಿಸಿ ಬೆವರಿನ, ಆಗಷ್ಟೇ ಮೂಡತೊಡಗಿದ್ದ ಪುಟ್ಟ ಮೊಲೆಗಳ, ನವಿರಾದ ಆ ಕೋಮಲ ಹುಡುಗಿಯ ಮುಖದಲ್ಲಿ ತಾತ್ಸಾರದ ಭಾವದೊಂದಿಗೆ ಅಲ್ಲಲ್ಲಿ ಕಗ್ಗೆಂಪಿನ ಬಟ್ಟುಗಳೇಳುತ್ತಿದ್ದವು. ಊಟದ ಹೊತ್ತಿನಲ್ಲಿ ಅವಳು ಯಾವತ್ತೂ ನನ್ನತ್ತ ನೋಡುವ ಧೈರ್ಯ ಮಾಡುತ್ತಿರಲಿಲ್ಲ. ನಾನೋ ಅವಳಿಗೆ ನನ್ನ ಅಪ್ಪನಿಗಿಂತಲೂ ಹೆಚ್ಚು ಹೆದರುತ್ತಿದ್ದೆ. ಆದರೆ, ಅವಳು ನನ್ನತ್ತ ನೋಡುವುದನ್ನು ತುಂಬಾ ಪ್ರಯಾಸದಿಂದ ಅದುಮಿಟ್ಟುಕೊಳ್ಳುತ್ತಿದ್ದರೆ, ಅಪ್ಪನ ತಣ್ಣನೆಯ ಓರೆ ನೋಟ ಮಾತ್ರ ನನ್ನತ್ತ ತೆವಳುತ್ತಿರುತ್ತಿತ್ತು. ನನಗನಿಸುತ್ತಿತ್ತು – ನನ್ನನ್ನು ನಿರ್ಲಕ್ಷಿಸುವ ಅವಳ ಯಾತನಾಮಯ ಪ್ರಯತ್ನಗಳು ಹಾಗೂ ಬದಲಿಗೆ ನನ್ನ ಅಪ್ಪನ ಮಾತುಗಳನ್ನು ಕೇಳುವುದು ಅಥವಾ ಸದಾ ಮೌನದಲ್ಲಿರುತ್ತಿದ್ದರೂ ದುಗುಡದಲ್ಲಿರುತ್ತಿದ್ದ ನನ್ನ ಸಿಡುಕಿನ ತಂಗಿಯ ಆರೈಕೆ ಮಾಡುವುದು–ಖುಷಿಗಾಗಿ ಕಾತರಿಸುತ್ತಿದ್ದ ನಾವಿಬ್ಬರೂ ಒಟ್ಟಿಗಿದ್ದೇವೆ ಅನ್ನುವ ಪುಕ್ಕಲುತನದ ಮತ್ತೊಂದು ಭಯವನ್ನು ಗುಟ್ಟಾಗಿಡುವುದಕ್ಕಾಗಿ.

ಅಪ್ಪ ಸಾಮಾನ್ಯವಾಗಿ ಸಾಯಂಕಾಲದ ಟೀಯನ್ನು ಉದ್ದನೆಯ ಚಿನ್ನದ ಅಂಚಿನ ಲೋಟದಲ್ಲಿ ಮೇಜಿನ ಬಳಿ ಓದುತ್ತಾ ಕೂತು ಕುಡಿಯುತ್ತಿದ್ದ. ಆದರೀಗ ಅವನು ನಮ್ಮ ಜೊತೆ ಡೈನಿಂಗ್ ಹಾಲಿನಲ್ಲಿ ಕುಡಿಯತೊಡಗಿದ. ಅವಳು ನಮ್ಮಿಬ್ಬರಿಗೂ ಸಮವಾರ್‌ನಿಂದ ಟೀ ಹಾಕಿ ಕೊಡುತ್ತಿದ್ದಳು. ಆ ಹೊತ್ತಿಗಾಗಲೇ ತಂಗಿ ಲೀಲ್ಯಾ ಮಲಗಿರುತ್ತಿದ್ದಳು. ಅಪ್ಪ ತನ್ನ ಓದುವ ಕೋಣೆಯಿಂದ ಉದ್ದನೆಯ ದೊಗಳೆ ದೊಗಳೆಯಾಗಿದ್ದ, ಕೆಂಪು ಅಂಚಿನ ಧೂಮಪಾನ ಅಂಗಿ ತೊಟ್ಟು, ಆಚೆ ಬಂದು ಆರಾಮ ಕುರ್ಚಿಯಲ್ಲಿ ಕೂತು, ಕೈಯ್ಯಲ್ಲಿದ್ದ ಲೋಟವನ್ನು ಅವಳಿಗೆ ಕೊಡುತ್ತಿದ್ದ. ಅವಳು ಅದರ ಅಂಚಿನವರೆಗೂ ಟೀ ಸುರಿದು, ನಡುಗುವ ಕೈಗಳಲ್ಲಿ ಅವನಿಗೆ ನೀಡುತ್ತಿದ್ದಳು. ಅನಂತರ ನನಗೆ ಹಾಕಿಕೊಟ್ಟು ತಾನೂ ಹಾಕಿಕೊಂಡು, ಕತ್ತು ಬಗ್ಗಿಸಿ ಹೊಲಿಗೆ ಕೆಲಸದಲ್ಲಿ ತೊಡಗುತ್ತಿದ್ದಳು.

ಆಗ ಅಪ್ಪ ಆರಾಮಾಗಿ ಕೂತು ನಿಜಕ್ಕೂ ವಿಚಿತ್ರ ಅನಿಸುವಂಥ ಸಂಗತಿಗಳ ಬಗ್ಗೆ ಮಾತನಾಡುತ್ತಿದ್ದ: 'ಡಿಯರ್ ಎಲೆನಾ, ಕಪ್ಪಿರಲಿ ಇಲ್ಲಾ ಕೆಂಪಿರಲಿ ಉದ್ದ ಕೂದಲಿದ್ದರೆ ಹೆಂಗಸರು ಎಷ್ಟು ಚಂದ ಕಣ್ತಾರೆ